# ಪುಷ್ಪಕ ಪೀಠವೇರಿದ ದಿವ್ಯ ದೇವತಾಮೂರ್ತಿ ಚಿತ್ರಾಂಗದಾ

## ಮದುವೆ ದಿಬ್ಬಣದೊಸಗೆ ಮೆರವಣಿಗೆ!

ಇತ್ತ ಪಾರ್ಥನ ಸೇನೆಯು ಪ್ರದ್ಯುಮ್ನ, ಅನುಸಾಲ್ವ, ಕರ್ಣನ ಮಗನ ಜೊತೆಗೆ ಯೌವನಾಶ್ವ, ಹಂಸಕೇತು, ನೀಲಧ್ವಜ ಮೊದಲಾದ ರಣಪರಿಣತರ ಸೂಚನೆಯನ್ನು ಅನುಸರಿಸಿ ವಿವಿಧ ವ್ಯೂಹಗಳನ್ನು ರಚಿಸಿತು. ವೈರಿದಳದ ಆಗಮನವನ್ನು ನಿರೀಕ್ಷಿಸುತ್ತಿತ್ತು.

ಆಗ ಅವರಿಗೆ ಯುದ್ಧವನ್ನು ನೀಡುವ ಸಾಹಸಿಗಳ ಸೈನ್ಯಕ್ಕೆ ಬದಲಾಗಿ, ಬೀಗರನ್ನು ಎದುರುಗೊಳ್ಳುವಂತೆ ತಮ್ಮ ಕಡೆಗೆ ಮೋಹನಾಂಗಿಯರೊಡನೆ ಮೋಹದಿಂದ ಬರುತ್ತಿರುವ ಮದುವೆ ದಿಬ್ಬಣದ ಉತ್ಸಾಹದ ಮೆರವಣಿಗೆ ಕಂಡಿತು. ಪಾಂಡವ ಸೇನಾ ಸಮುದ್ರದಲ್ಲಿ ಗೊಳ್ಳೆಂದು ನಗೆಯ ತೆರೆ ನೊರೆಯು ಉತ್ಸಾಹದಿಂದ ಉಕ್ಕೇರಿತು. ಅಸಂಖ್ಯ ಜನರ ಕೈಗಳ ತಡೆರಹಿತ ಚಪ್ಪಾಳೆಯಿಂದ ಸಿಡಿಲು ಬಡಿದಂತಾಯಿತು.

